Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 Zone 1, R. I. Dist. 3182 Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 Issue - 42 10th April 2025

## JOINT MEETING WITH ROTARY CLUB KUNDAPUR MIDTOWN

ಮುಖ್ಯ ಅತಿಥಿ :

ಶ್ರೀ ಮಥಾಯಸ್ ಡೆಸ

ಪರಿಸರ ಪ್ರೇಮಿ, ಮೂಡ್ಲಕಟ್ಟೆ

ವಿಷಯ : **ಕಾಡಿನ ಪೋಷಣೆ ಮತ್ತು ರಕ್ಷಣೆ**

Time : 7.00 p.m.
Venue : Hotel Shivaprasad Grand, Kundapura

**39th year of Service and Fellowship**

## ವಾರದ ವರದಿ




ತಾ. 03–04–2025ರ ನಮ್ಮ ಸಾಪ್ತಾಹಿಕ ಸಭೆಯು ಹೋಟೆಲ್ ಶಿವಪ್ರಸಾದ್ ಗ್ರ್ಯಾಂಡ್‌ನ ಸಭಾಂಗಣದಲ್ಲಿ ರೋಟರಿ ಕ್ಲಬ್ ಕುಂದಾಪುರ ರಿವರ್‌ಸೈಡ್‌ನೊಂದಿಗೆ ಜಂಟಿಯಾಗಿ ನಡೆಸಲಾಯಿತು. ಏಪ್ರಿಲ್ ತಿಂಗಳು ರೋಟರಿಯು ಪರಿಸರ ಕಾಳಜಿಗಾಗಿ ಮೀಸಲಿಟ್ಟಿರುವುದರಿಂದ ರೋಟರಿ ಕ್ಲಬ್ ಕುಂದಾಪುರದ ಮಾಜಿ ಅಧ್ಯಕ್ಷರಾದ ಹಾಗೂ ಪರಿಸರ ಪ್ರೇಮಿಯಾಗಿರುವ ದಂತವೈದ್ಯ ರೊ. ಡಾ. ರಾಜಾರಾಮ್ ಶೆಟ್ಟಿಯವರು ಅತಿಥಿಯಾಗಿ ಆಗಮಿಸಿದ್ದರು. ನಮ್ಮ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ರೋಟರಿ ಕ್ಲಬ್ ಕುಂದಾಪುರ ರಿವರ್‌ಸೈಡಿನ ಭಾವಿ ಅಧ್ಯಕ್ಷರಾದ ರೊ. ಸದಾನಂದ ಉಡುಪ ಮತ್ತು ಕಾರ್ಯದರ್ಶಿ ರೊ. ರೊನಾಲ್ಡ್ ಡಿ'ಮೆಲ್ಲೋರವರೊಂದಿಗೆ ಅತಿಥಿ ರೊ. ಡಾ. ರಾಜಾರಾಮ್ ಶೆಟ್ಟಿಯವರನ್ನು ವೇದಿಕೆಗೆ ಆಹ್ವಾನಿಸಿದರು. ಆಗಮಿಸಿದ ಎರಡೂ ಕ್ಲಬ್‌ಗಳ ಸದಸ್ಯರನ್ನು ಮತ್ತು ವೇದಿಕೆಯಲ್ಲಿರುವ ಗಣ್ಯರನ್ನು ಅಧ್ಯಕ್ಷರು ಆತ್ಮೀಯವಾಗಿ ಸ್ವಾಗತಿಸಿದರು. ಹಂಗಾಮಿ ಕಾರ್ಯದರ್ಶಿ ರೊ. ಸತ್ಯನಾರಾಯಣ ಪುರಾಣಿಕ್‌ರವರು ಕಳೆದ ವಾರದ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ವಾರದ ಚಿಂತನೆಯನ್ನು ನೀಡಿದ ರೊ. ವಿವಿಯನ್ ಕ್ರಾಸ್ಟೋರವರು ಯುಗಾದಿಯ ಸಂದೇಶವನ್ನು ನೀಡುತ್ತಾ ಜೀವನದಲ್ಲಿ ಬೇವು (ಕಷ್ಟಗಳು) ಪುಕ್ಕಟೆಯಾಗಿ ಸಿಗುತ್ತವೆಯಾದರೂ ಬೆಲ್ಲ ಸಿಗಬೇಕಾದರೆ ನಾವು ಕಷ್ಟ ಪಡಲೇಬೇಕು. ಇದುವೇ ಯುಗಾದಿಯ ಸಂದೇಶವೆಂದರು. ರೋಟರಿ ಮಾಹಿತಿ ನೀಡಿದ ಪಿಪಿ ರೊ. ನರಸಿಂಹ ಹೊಳ್ಳರವರು ಪ್ರಕೃತಿಯನ್ನು ಚೆನ್ನಾಗಿಡಲು ರೋಟರಿಯ ಸಂವಿಧಾನ ಏನು ಹೇಳುತ್ತದೆ ಎಂದು ವಿವರಿಸಿದರು. ಮುಖ್ಯ ಅತಿಥಿಯವರನ್ನು ರೊ. ರಮಾನಂದ ಕಾರಂತ್‌ರವರು ಸಭೆಗೆ ಸೊಗಸಾಗಿ ಪರಿಚಯಿಸಿದರು. ನಂತರ ಅತಿಥಿಯವರು ಪ್ರಕೃತಿ ಸಂರಕ್ಷಣೆಯಲ್ಲಿ ನಮ್ಮ ಪಾತ್ರವೆನ್ನುವ ವಿಚಾರದಲ್ಲಿ ಮಾತನಾಡಿದ ರೊ. ಡಾ. ರಾಜಾರಾಮ್ ಶೆಟ್ಟಿಯವರು "ರೋಟರಿಯು ಏಪ್ರಿಲ್ ತಿಂಗಳನ್ನು ಪ್ರಕೃತಿಯ ಕಾಳಜಿಗಾಗಿ ಮೀಸಲಿಟ್ಟಿರುವುದರಿಂದ ಇಡೀ ಪ್ರಪಂಚದಲ್ಲಿ ಎಲ್ಲಾ ರೋಟರಿ ಕ್ಲಬ್‌ಗಳೂ ವಿವಿಧ ರೀತಿಯ ಸೇವೆಗಳನ್ನು ಹಾಗೂ ತರಬೇತಿಗಳನ್ನು ನೀಡುವುದರಿಂದ ಮುಂದಿನ ಪೀಳಿಗೆಗಾಗಿ ನಾವು ವಿಶ್ವವನ್ನು ಸ್ವಲ್ಪ ಮಟ್ಟಿಗಾದರೂ ಶುಭ್ರಗೊಳಿಸಲು ಪ್ರಯತ್ನಿಸುತ್ತೇವೆ. ಇದೇ ರೀತಿಯ ಚಿಂತನೆಯನ್ನು ಪ್ರಪಂಚದ ಎಲ್ಲಾ ಸಂಘ ಸಂಸ್ಥೆಗಳೂ ಅನುಕರಿಸಿ ಒಂದೊಂದು ತಿಂಗಳನ್ನೂ ಪ್ರಕೃತಿಗಾಗಿ ಮೀಸಲಿಟ್ಟರೆ ಖಂಡಿತವಾಗಿ ಗಣನೀಯ ಸಾಧನೆಯನ್ನು ಸಾಧಿಸಬಹುದು. ಕಳೆದ 50 ವರ್ಷಗಳಿಗೆ ನಾವು ತುಲನೆಯನ್ನು ಮಾಡಿದರೆ ಆಧುನಿಕತೆಯ ಪರಮಾವಧಿಯನ್ನು ನಾವು ಮುಟ್ಟಿದ್ದೇವೆ ಎನ್ನಬಹುದು. ಆದರೆ ಅಷ್ಟೇ ವರ್ಷಗಳಲ್ಲಿ ಇಡೀ ಜಗತ್ತನ್ನು ನಾವು ಎಣಿಸಲಾಗದಷ್ಟು ಮಲೀನಗೊಳಿಸಿದ್ದೇವೆ. ಇಂದು ನಮಗಿಂತ ಹಿಂದುಳಿದ ಅನೇಕ ದೇಶಗಳು ತಮ್ಮ ದೇಶವನ್ನು ಶುಭ್ರವಾಗಿ ಇಟ್ಟುಕೊಂಡಿವೆ. ಆದರೆ ನಮ್ಮ ದೇಶವನ್ನು ಪ್ಲಾಸ್ಟಿಕ್ ಮತ್ತು ಗುಟ್ಕಾಗಳು ಅತ್ಯಂತ ಕೊಳಕುಗೊಳಿಸಿದೆ. ನಾವು ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸದೊಂದಿಗೆ ಪರಿಸರದ ಕಾಳಜಿಯನ್ನು ಕಲಿಸುವ ಬದಲು ಪುರಸಭೆಯ ಕಸವಿಲೇವಾರಿ ತಂಡಕ್ಕೆ ಮಾಸಿಕ 50/– ರೂ. ಗಳನ್ನು ನೀಡದೇ ನಮ್ಮ ಮನೆಯ ಕಸವನ್ನು ರಸ್ತೆಯ ಬದಿಯಲ್ಲಿ ಬಿಸಾಡಿ ನಮ್ಮ ಮಕ್ಕಳಿಗೂ ಕೂಡಾ ಅದೇ ಮಾದರಿಯಲ್ಲಿ ಬೆಳೆಸುತ್ತಿದ್ದೇವೆ" ಎಂದು ತಮ್ಮ ಬೇಸರವನ್ನು ವ್ಯಕ್ತ ಪಡಿಸಿದರಲ್ಲದೇ, ಮುಂದಿನ ದಿನಗಳಲ್ಲಿ ನಾವು ನಮ್ಮ ಮನೆಯ ಮತ್ತು ಶಾಲಾ ಪರಿಸರದಲ್ಲಿ ಕೆಲವು ಗಿಡಗಳನ್ನು ನೆಟ್ಟು ಪೋಷಿಸಿ ಮುಂದಿನ ಪೀಳಿಗೆಯವರಿಗೆ

ಮಾದರಿಯಾಗೋಣವೆಂದು ಕರೆ ನೀಡಿದರು. ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಅತಿಥಿಗಳ ಪರಿಸರ ಕಾಳಿಜಿಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿ ತಾ. 6–04–2025ರಂದು ತಲ್ಲೂರಿನಲ್ಲಿ ನಾವು ಮತ್ತು ತಲ್ಲೂರು ಪಂಚಾಯತ್ ವತಿಯಿಂದ ಮಣಿಪಾಲದ ಕೆ.ಎಂ.ಸಿ.ಯ ದಂತ ವೈದ್ಯಕೀಯ ಕಾಲೇಜಿನ ವೈದ್ಯರಿಂದ ನಡೆಸುವ ಉಚಿತ ದಂತ ವೈದ್ಯಕೀಯ ಶಿಬಿರವನ್ನು ಯಶಸ್ವಿಗೊಳಿಸಲು ಎಲ್ಲರ ಸಹಕಾರವನ್ನು ಕೋರಿದರು. ಎರಡೂ ಕ್ಲಬ್‌ಗಳ ಅಧ್ಯಕ್ಷರುಗಳು ತಮ್ಮ ತಮ್ಮ ಕ್ಲಬ್‌ಗಳ ಧ್ವಜಗಳನ್ನು ವಿನಿಮಯಗೊಳಿಸಿದ ನಂತರ ಮಾತನಾಡಿದ ರೋಟರಿ ಕುಂದಾಪುರ ರಿವರ್‌ಸೈಡಿನ ಭಾವಿ ಅಧ್ಯಕ್ಷರಾದ ರೊ. ಸದಾನಂದ ಉಡುಪರವರು ತಮಗೆ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದೊಂದಿಗೆ ಜಂಟಿ ಸಭೆಯನ್ನು ನಡೆಸಲು ಅನುವು ಮಾಡಿಕೊಟ್ಟ ಅಧ್ಯಕ್ಷರಿಗೆ ತಮ್ಮ ಧನ್ಯವಾದಗಳನ್ನು ತಿಳಿಸಿದರಲ್ಲದೇ ಮುಂದಿನ ದಿನಗಳಲ್ಲಿ ಇದೇ ಬಾಂಧವ್ಯವನ್ನು ಮುನ್ನಡೆಸೋಣವೆಂದು ಕರೆ ನೀಡಿದರು. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ನಗೆಹನಿಯನ್ನು ಸಿಡಿಸಿದರು. ಲಕ್ಕಿ ರೊಟೇರಿಯನ್ ಆಗಿ ರೊ. ಸುರೇಖಾ ಪುರಾಣಿಕ್‌ರವರು ಆಯ್ಕೆಯಾದರು. ರಿವರ್‌ಸೈಡ್ ಕ್ಲಬ್ಬಿನ ಮಾಜಿ ಅಧ್ಯಕ್ಷರಾದ ರೊ. ಮಂಜುನಾಥ ಮೊಗವೀರರವರು ಧನ್ಯವಾದಗಳನ್ನು ನೀಡಿದ ನಂತರ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಸಮಾಪ್ತಿಗೊಳಿಸಲಾಯಿತು.




ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಹಾಗೂ ತಲ್ಲೂರು ಗ್ರಾಮ ಪಂಚಾಯತ್ ಜಂಟಿ ಆಶ್ರಯದಲ್ಲಿ ತಾ. 6/04/2025ರಂದು ಅಂಬೇಡ್ಕರ್ ಭವನ, ತಲ್ಲೂರು ಇಲ್ಲಿ ಸಾರ್ವಜನಿಕರಿಗೆ ಮಣಿಪಾಲದ ಕೆಎಂಸಿಯ ನುರಿತ ಅನುಭವಿ ದಂತವೈದ್ಯರಿಂದ ಹಲ್ಲಿನ ತಪಾಸಣಾ ಶಿಬಿರ ನೆರವೇರಿತು. ಸುಮಾರು 75 ಮಂದಿ ಈ ಶಿಬಿರದಲ್ಲಿ ಭಾಗವಹಿಸಿ, 62 ಮಂದಿ ಇದರ ಪ್ರಯೋಜನ ಪಡೆದುಕೊಂಡರು.

## Rotary Information

### April is Rotary's Environmental Month!

This month, let's unite in our commitment to environmental conservation by taking meaningful action.

Tree Planting Drives – Increase green cover and improve air quality.

Waste Reduction & Recycling – Promote responsible disposal and reuse of materials.

Clean-Up Campaigns – Organize local efforts to keep our communities clean.

Water Conservation Initiatives – Spread awareness about preserving water resources.

Sustainable Practices – Encourage eco-friendly habits in daily life.

Every small effort contributes to a greater impact. The future of our planet depends on the actions we take today—Let's work together for a cleaner, healthier Earth!

**By Rtn. Narasimha Holla**

## ಕಳೆದ ವಾರದ ಚಿಂತನೆ

### ಯುಗಾದಿ

ಬೇವಿನ ಮರಗಳನ್ನು ಕಂಡೆ, ಆದರೆ –
ಎಲ್ಲಿಯೂ ಬೆಲ್ಲದ ಮರವೇ ಇಲ್ಲ...,
ಈಗ ಜೀವನದ ಕಹಿ–ಸಿಹಿಗಳಿಗೆ
ಸ್ಪಷ್ಟತೆ ಸಿಕ್ಕಿತು..,

ಬೇವು ಸಹಜ, ಆದರೆ ಬೆಲ್ಲ
ತಯಾರಿಸಬೇಕು...
ಜೀವನದಲ್ಲಿ ಕಷ್ಟ (ಕಹಿ) ಸಹಜ,
ಕಷ್ಟಪಟ್ಟು ಸುಖ (ಸಿಹಿ) ಪಡೆಯಬೇಕು
ನಮ್ಮ ಬೆಲ್ಲ ನಾವೇ ತಯಾರಿಸಬೇಕು
ಅದೇ ಜೀವನ.

ಯುಗಾದಿ ನಮಗೆ ಪ್ರಕೃತಿಯ ಮೂಲಕ ಮಾತ್ರವಲ್ಲದೇ.. ಜೀವನದ ಅರ್ಥ ತಿಳಿಯುವ ಸಾರಾಂಶ ನೀಡಿದೆ.

ನೀಡಿದವರು – ರೊ. ವಿವಿಯನ್ ಕ್ರಾಸ್ಟೋ

